**ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಹುದ್ದೆಗಳ ಬಗ್ಗೆ**

1306 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರ ಮಂಜೂರಾತಿ ಹುದ್ದೆಗಳ ಸಂಖ್ಯೆ ಎಷ್ಟು?*

*ಆ) ಅವುಗಳನ್ನು ವರ್ಗ ಮತ್ತು ನೇಮಕಾತಿ ನಿಯಮದ ಪ್ರಕಾರ ಭರ್ತಿ ಮಾಡಲಾಗಿದೆಯೇ?*

*ಇ) ಇದುವರೆಗೂ ಬಡ್ತಿ ನೀಡಿರುವ ಸಂಖ್ಯೆ ಎಷ್ಟು? ಮಂಜೂರಾಗಿರುವುದಕ್ಕಿಂತಲೂ ಹೆಚ್ಚಾಗಿ ಬಡ್ತಿ ನೀಡಿದ್ದಲ್ಲಿ ಯಾವ ವರ್ಗ ಮತ್ತು ನೇಮಕಾತಿಯನ್ನು ಪಾಲಿಸಿ ಬಡ್ತಿ ನೀಡಲಾಗಿದೆ?*

*ಈ) ಬಡ್ತಿ ನೀಡಿರುವ ಬಗ್ಗೆ ನ್ಯಾಯಾಲಯದ ಯಾವುದಾದರೂ ತೀರ್ಪು ಬಂದಿದೆಯೇ, ಅದರನ್ವಯ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?*

*ಉ) ಮಂಜೂರಾತಿ ಸಂಖ್ಯೆಗಿಂತ ಹೆಚ್ಚಾಗಿ ಬಡ್ತಿ ನೀಡಿದಲ್ಲಿ ನೌಕರರ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳೇನು, ಅವರನ್ನು ಅಧೀಕ್ಷಕರ ಪದಕ್ರಮ ಪಟ್ಟಿಯಲ್ಲಿ ಸೇರಿಸಲಾಗಿದೆಯೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) 31 ಹುದ್ದೆಗಳು

ಆ) ಹೌದು

ಇ) ಇದುವರೆವಿಗೂ ಬಡ್ತಿ ನೀಡಿರುವ ಸಂಖ್ಯೆ 50 ಕರ್ನಾಟಕ ಆಡಳಿತ ವ್ಯಾಯ ಮಂಡಳಿಯ ಆದೇಶದಂತೆ ನೀಡಿರುವ ಬಡ್ತಿಯನ್ನು ಪುನರ್ ಪರಿಶೀಲಿಸುವಾಗ, ಹಿಂಬಡ್ತಿ ನೀಡದೆ ಸರ್ಕಾರದ ಸೂಚನೆಯಂತೆ ತಾತ್ಕಾಲಿಕವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ಸೂಚಿಸಿರುವಂತೆ ನಿಯೋಜನೆಯ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಹೌದು, ನ್ಯಾಯಾಲಯವು ತೀರ್ಪು ನೀಡಿದ ಪ್ರಕಾರ ಅರ್ಹರಿರುವವರಿಗೆ ಬಡ್ತಿ ನೀಡಲಾಗಿದೆ.

ಉ) ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ ಮುಂಬಡ್ತಿ ನೀಡಲಾಗಿದೆ. ಈಗಾಗಲೇ ಮುಂಬಡ್ತಿ ಹೊಂದಿರುವ ಅಂದರೆ ನ್ಯಾಯ ಮಂಡಳಿಯ ಆದೇಶದ ಪೂರ್ವದಲ್ಲಿ ಪ್ರಥಮ ದರ್ಜೆ ಸಹಾಯಕ ವೃಂದದಿಂದ ಬಡ್ತಿ ಹೊಂದಿದ್ದ ನೌಕರರನ್ನು ಹಿಂಬಡ್ತಿ ಮಾಡದೇ ತಾತ್ಕಾಲಿಕವಾಗಿ ನಿಯೋಜನೆ ಮೇರೆಗೆ ಬೇರೆ ಇಲಾಖೆಗೆ ನಿಯೋಜಿಸಲಾಗಿದೆ. ಸದರಿ ನೌಕರರನ್ನು ಪದಕ್ರಮ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.

**International Air Port at Devanahalli**

1033 - Shri N. Rajanna (Bharathinagara) : Will the Minister for Large & Medium Industries be pleased to state?

*a) Whether the Govt. has taken up the construction of International airport at Devanahalli near Bangalore.*

*b) If so, Whether it will be constructed in joint venture.*

*c) Whether TATA's have been entrusted with the above work?*

*d) When it would be completed?*

Sri R.V. Deshpande (Minister for large and Medium Industries.) :

a) Govt. have entrusted the work of implementation of the project to construct an airport near Devanahalli conforming to international standard to TATA industries Ltd, and Consortium formed by them on 'build-Own-Operate' basis.

b) A decision is yet to be taken, KSIIDC is however considering to participate in the equity of the proposed project.

c) As replied to question A

d) As per the time frame indicated by the TATA consortium, the Airport whould be ready for Cargo Operation in about 36 months and for passenger traffic in about 48 months from the date of giving possession of land.

## ಜಂಟಿ ಸಲಹಾ ಸಮಿತಿ ರಚನೆ (ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದು)

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ,

1995ನೇ ಸಾಲಿನ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ತಿದ್ದುಪಡಿ ವಿಧೇಯಕವನ್ನು ಹದಿನೈದು ಜನ ವಿಧಾನಸಭೆಯ ಮತ್ತು ಐದು ಜನ ವಿಧಾನ ಪರಿಷತ್ತಿನ ಒಟ್ಟು ಇಪ್ಪತ್ತು ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು, ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕಾಗಿದೆ. ಈ ಕೆಳಕಂಡ ವಿಧಾನ ಸಭೆಯ ಸದಸ್ಯರುಗಳು ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಬೇಕೆಂದು ಹಾಗೂ ಸಮಿತಿಯ ವರದಿಯನ್ನು ದಿನಾಂಕ 15-9-95ರೊಳಗಾಗಿ ಸದನಕ್ಕೆ ಮಂಡಿಸಬೇಕೆಂಬ ವಿಚಾರವನ್ನು ಸೂಚಿಸುತ್ತೇನೆ.

ಶ್ರೀಯುತರುಗಳಾದ :

1. ವಿ. ಸೋಮಣ್ಣ
2. ಎಸ್. ರಾಜಣ್ಣ
3. ಶ್ರೀಮತಿ ಡಿ.ಜೆ. ಹೇಮಾವತಿ
4. ಅಶ್ವತ್ಥ್ನಾರಾಯಣ ರೆಡ್ಡಿ
5. ಜೆ.ಎ. ಫೆರ್ನಾಂಡೀಸ್
6. ಕೆ. ಶರಣಪ್ಪ
7. ಕೃಷ್ಣ
8. ಹೆಚ್.ಕೆ. ಕುಮಾರಸ್ವಾಮಿ
9. ಶ್ರೀಮತಿ ಜ್ಯೋತಿ ರೆಡ್ಡಿ
10. ಯು.ಆರ್. ಸಭಾಪತಿ
11. ಬಿ. ಮುನಿಯಪ್ಪ
12. ಸಿ.ಆರ್. ಸಗೀರ್ ಅಹಮ್ಮದ್